ಕ್ರ.ಸ. 15

# ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರಿಸುವ ಬಗ್ಗೆ

**ವಿಷಯ:**

ಸಂಚಾರ ನಿಯಮ ಉಲ್ಲಂಘನೆ ಪ್ರಕರಣದ ಬಾಕಿ ದಂಡ ಪಾವತಿಗೆ ರಾಜ್ಯ ಸರ್ಕಾರ ಘೋಷಿಸಿದ್ದ ಶೇಕಡಾ 50ರಷ್ಟು ರಿಯಾಯಿತಿಯು ದಿನಾಂಕ 11-02-2023ಕ್ಕೆ ಮುಕ್ತಾಯಗೊಂಡಿರುವ ಅವಧಿಯನ್ನು ವಿಸ್ತರಣೆ ಮಾಡಲು ಸಾರ್ವಜನಿಕರ ಒತ್ತಾಯದ ಮೇರೆಗೆ ಪತ್ರಿಕೆಗಳಲ್ಲೂ ವರದಿಯಾಗಿರುವುದನ್ನು ಲಗತ್ತಿಸಲಾಗಿದೆ. ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಶಿಫಾರಸಿನ ಮೇರೆಗೆ 44 ಬಗೆಯ ಎಲ್ಲಾ ಸಂಚಾರ ನಿಯಮ ಉಲ್ಲಂಘನೆಯ ದಂಡ ಪಾವತಿಗೆ ರಿಯಾಯಿತಿ ನೀಡಲಾಗಿತ್ತು. 1,300 ಕೋಟಿ ರೂಗಳಿಗೂ ಹೆಚ್ಚು ದಂಡ ಬಾಕಿ ಉಳಿದಿತ್ತು. ಬೆಂಗಳೂರು ಒಂದರಲ್ಲೇ 2.35 ಕೋಟಿ ಉಲ್ಲಂಘನೆ ಪ್ರಕರಣಗಳ 1,144 ಕೋಟಿ ರೂ. ದಂಡ ಬಾಕಿ ಇದೆ. 41,20,626 ಕೇಸ್‌ಗಳಿಗೆ ರಿಯಾಯಿತಿ ದರದಲ್ಲಿ ಒಟ್ಟು 120.76 ಕೋಟಿ ರೂ. ದಂಡ ಪಾವತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ 150 ಕೋಟಿ ರೂಗಳಿಗೂ ಅಧಿಕ ದಂಡ ಸಂಗ್ರಹವಾಗಿದ್ದು, ಸುಮಾರು ಇನ್ನು ಒಂದು ಸಾವಿರ ಕೋಟಿ ರೂ ಬಾಕಿ ಉಳಿದಿರುವ ಸಾಧ್ಯತೆ ಇದೆ. ಸಂಚಾರ ಪೊಲೀಸ್ ಠಾಣೆಗಳಲ್ಲಿನ ಎ.ಎಸ್.ಐ/ಪಿ.ಎಸ್.ಐ ಮತ್ತು ಇನ್ಸ್‌ಪೆಕ್ಟರ್‌ಗಳ ಬಳಿ ಇರುವ ಪರ್ಸನಲ್ ಡಿಜಿಟಲ್ ಅಸಿಸ್ಟೆನ್ಸ್ (ಪಿಡಿಎ) ಉಪಕರಣ, ಪೇಟಿಎಂ, ಟಿ.ಎಂ.ಸಿ. ಹಾಗೂ ಬೆಂಗಳೂರು ಒನ್ ಕೇಂದ್ರಗಳಲ್ಲಿ ದಂಡ ಪಾವತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಅಂದಾಜು ಇನ್ನು ಸುಮಾರು ಸಾವಿರಾರು ಕೋಟಿ ರೂಗಳನ್ನು ಸಂಗ್ರಹಿಸಬೇಕಾಗಿದೆ. ಪರಿಸ್ಥಿತಿ ಹೀಗಿರಬೇಕಾದರೆ ಈ ದಂಡ ಪಾವತಿಗೆ ನೀಡಿರುವ ಸಮಯ ಏನೇನು ಸಾಲದು. ಕೆಲವು ಕಡೆ ಸಾಫ್ಟ್‌ವೇರ್‌ಗಳು, ಸರ್ವರ್‌ಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಎಲ್ಲಿ ನೋಡಿದರೂ ದಂಡ ಕಟ್ಟಲು ಕ್ಯೂ ಇದೆ. ಆದ್ದರಿಂದ ಈ ದಂಡ ಪಾವತಿಸಲು ಕನಿಷ್ಠ ಪಕ್ಷ 5 ತಿಂಗಳಾದರೂ ಸಮಯವನ್ನು ನೀಡಬೇಕಾಗಿದೆ. ರಾಜ್ಯಾದ್ಯಂತ ಇಂತಹ ಎಷ್ಟು ಪ್ರಕರಣಗಳಿವೆ, ಹಾಗೂ ಜಿಲ್ಲಾವಾರು ಎಷ್ಟು ದಂಡ ಪ್ರಕರಣಗಳು ನೋಂದಣಿಯಾಗಿವೆ, ಬಾಕಿ ಇರುವ ಮೊತ್ತವೆಷ್ಟು ಎನುವ ಬಗ್ಗೆ ಸರ್ಕಾರ ಸರಿಯಾದ ಮಾಹಿತಿ ನೀಡಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರ ದಂಡ ಉಲ್ಲಂಘನೆ ಪ್ರಕರಣಗಳು ಮತ್ತು ಅದಕ್ಕೆ ವಿಧಿಸಿರುವ ದಂಡದ ಮೊತ್ತದ ವಿವರ ಕುರಿತು ಜಿಲ್ಲಾವಾರು ವಿವರವಾದ ಮಾಹಿತಿ ನೀಡಲು ವಿನಂತಿಸುತ್ತೇನೆ. ಇದು ಅಲ್ಲದೆ 44 ಸಂಚಾರ ನಿಯಮದ ಉಲ್ಲಂಘನೆ ಕುರಿತು ಸಾರ್ವಜನಿಕ ವಾಹನ ಸವಾರರಿಗೆ ವಿಧಿಸಿರುವ ದಂಡ ಅವೈಜ್ಞಾನಿಕವಾಗಿ ಕೂಡಿರುತ್ತದೆ. ಕೆಲವು ವಾಹನ ಸವಾರರು ನಿಯಮ ಉಲ್ಲಂಘನೆ ಮಾಡದಿದ್ದರೂ ಸಹ ಪ್ರಕರಣಗಳು ದಾಖಲಾಗಿವೆ. ಪಾನಮತ್ತ ವಾಹನ ಸಂಚಾರ ಮಾಡಿದ ಪ್ರಕರಣಗಳಲ್ಲಿ ಬೇಕಾಬಿಟ್ಟಿ ದಂಡವನ್ನು ಹಾಕಲಾಗಿದೆ.

ಆದ ಕಾರಣ ಮೇಲೆ ವಿವರಿಸಿರುವ ಎಲ್ಲಾ ಮಾಹಿತಿ ಮತ್ತು ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ನಿಯಮ ಉಲ್ಲಂಘನೆ ಮಾಡಿದ ಪ್ರಕರಣಗಳಲ್ಲಿ ದಂಡ ವಸೂಲಿ ಮಾಡಲು ಸರ್ಕಾರ ಕನಿಷ್ಠ ಪಕ್ಷ 5 ತಿಂಗಳುಗಳ ಅವಧಿಯನ್ನು ನೀಡಿ, ವಿಸ್ತರಿಸಬೇಕೆಂದು ನಾನು ಸರ್ಕಾರಕ್ಕೆ ಮತ್ತು ಮಾನ್ಯ ಸಾರಿಗೆ ಸಚಿವರಲ್ಲಿ ವಿನಂತಿಸುತ್ತೇನೆ.

**ಉತ್ತರ:**

ಮೋಟಾರು ವಾಹನ ಕಾಯ್ದೆ 1988, ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989 ಮತ್ತು ಕರ್ನಾಟಕ ಮೋಟಾರು ವಾಹನಗಳ ನಿಯಮಗಳು 1989ರಡಿಯಲ್ಲಿ ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್ ನಲ್ಲಿ ದಾಖಲಾಗಿರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇಕಡ 50% ರ ರಿಯಾಯಿತಿ ನೀಡಲು ಅವಕಾಶವಿರುವುದಿಲ್ಲ.

ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಅಧ್ಯಕ್ಷರು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ, ಕಾನೂನು, ಸಾರಿಗೆ ಹಾಗೂ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ನಡೆದ ದಿನಾಂಕ:27-01-2023 ರ ಸಭೆಯ ನಡವಳಿಯಲ್ಲಿ "it is resolved to request the Transport Department to take steps at the earliest and report compliance in order to ensure "Access to Justice for all" ಎಂದು ಆದೇಶಿಸಲಾಗಿರುತ್ತದೆ.

ಅದರಂತೆ, ರಾಜ್ಯಾದ್ಯಂತ ಪೊಲೀಸ್ ಇಲಾಖೆಯ ಸಂಚಾರಿ ಇ-ಚಲನ್ ನಲ್ಲಿ ದಾಖಲಾಗಿರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇಕಡ 50% ಅನ್ನು ರಿಯಾಯಿತಿ ಮಾಡಲು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರು ದಿನಾಂಕ:30-01-2023 ರಂದು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ ಟಿಡಿ 27 ಟಿಡಿಒ 2023 ಬೆಂಗಳೂರು ದಿನಾಂಕ: 02-02-2023ರಲ್ಲಿ ಪೊಲೀಸ್ ಇಲಾಖೆಯ ಇ-ಚಲನ್ ನಲ್ಲಿ ದಾಖಲಾಗಿರುವ ಬಾಕಿಯಿರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇಕಡ 50% ಅನ್ನು ದಿನಾಂಕ:11-02-2023 ರವರೆಗೆ ರಿಯಾಯಿತಿ ನೀಡಿ ಆದೇಶ ಹೊರಡಿಸಲಾಗಿರುತ್ತದೆ.

ಬಾಕಿ ಸಂಚಾರಿ ಪ್ರಕರಣಗಳ ಮತ್ತು ದಂಡ ಮೊತ್ತ ಸಂಗ್ರಹಿಸಿರುವ ಮಾಹಿತಿಯನ್ನು ಪೊಲೀಸ್ ಇಲಾಖೆಯಿಂದ ಒದಗಿಸಲಾಗಿದ್ದು, ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಸದರಿ ವಿಷಯದ ಸಂಬಂಧ ದಿನಾಂಕ:14-02-2023 ರಂದು ಕಾನೂನು, ಸಾರಿಗೆ ಹಾಗೂ ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಅಧ್ಯಕ್ಷರು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಿ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದ್ದು, ಸದರಿ

ಸಭೆಯ ನಡವಳಿಯಲ್ಲಿ, ರಿಯಾಯಿತಿಯ ಅವಧಿಯನ್ನು ವಿಸ್ತರಿಸಲು ನಿರ್ಣಯಿಸಲಾಗಿರುತ್ತದೆ.

ಅದರಂತೆ, ಕರ್ನಾಟಕ ರಾಜ್ಯದಲ್ಲಿ ಪೊಲೀಸ್ ಇಲಾಖೆಯಿಂದ ಸಂಚಾರಿ ಇ-ಚಲನ್ ಮೂಲಕ ವಿಧಿಸಿದ ದಂಡದ ಮೊತ್ತದಲ್ಲಿ ವಿನಾಯಿತಿ ನೀಡುವ ಅವಧಿಯನ್ನು ವಿಸ್ತರಿಸುವ ಕುರಿತ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

ಟಿಡಿ 12 ಟಿಡಿಕ್ಯೂ 2023

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ
ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 17/03/2023 07:35 PM